# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಗುಬ್ಬಿ

**ದಿನಾಂಕಃ 09.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ. ಕೆ ಎಂ ಎಸ್ ರವರಿಂದ

ದಾವಾ ಸ್ವತ್ತಿನ ಹಳೇ ಸರ್ವೆ ನಂಬರ್ ಏನು ಎಂದರೆ ಸ.ನಂ.12/5 ಎಂದು ನುಡಿಯುತ್ತಾರೆ. ಅದು ಒಟ್ಟು ಎಷ್ಟು ಎಕರೆ ಇರುತ್ತದೆ ಎಂದರೆ 7 ಎಕರೆ 2 ಗುಂಟೆ ಎಂದು ನುಡಿಯುತ್ತಾರೆ. ಆ ಆಸ್ತಿ ಬಿ ಆರ್ ಷಡಕ್ಷಾರಪ್ಪ ರವರಿಗೆ ಸೇರಿದ್ದು ಎಂದರೆ ಸಾಕ್ಷಿಯು 3 ಎಕರೆ ಅವರಿಗೆ ಸೇರಿದ್ದು ಎಂದು ನುಡಿಯುತ್ತಾರೆ. ಉಳಿದ ಆಸ್ತಿ ಯಾರಿಗೆ ಸೇರಿದ್ದು ಎಂದರೆ ಬಿ ಆರ್ ಮರುಳಸಿದ್ದಪ್ಪ ರವರಿಗೆ 3 ಎಕರೆ 28 ಗುಂಟೆ ಮತ್ತು ಡಿ ವಿ ಕೃಪಾ ಶಂಕರ್ ರವರಿಗೆ 14 ಗುಂಟೆ ಎಂದು ನುಡಿಯುತ್ತಾರೆ. ವಾದಿಯ ತಂದೆಯಾದ ಎಸ್ ಪಿ ಷಡಾಕ್ಷರಯ್ಯ ರವರು ಡಿ ಆರ್ ಷಡಾಕ್ಷರಪ್ಪ ರವರಿಂದ ದಿಃ 24.03.1970 ರಂದು ಸ.ನಂ.12/5 ರಲ್ಲಿ 2 ಎಕರೆ ಆಸ್ತಿಯನ್ನು ಕೊಂಡುಕೊಂಡಿದ್ದರು ಎಂದರೆ ಸರಿ. ದಿಃ 24.10.1970 ರಂದು ವಾದಿಯ ತಂದೆ ಪುನಃ ಡಿ ಆರ್ ಷಡಾಕ್ಷರಪ್ಪ ರವರಿಂದ 1 ಎಕರೆ ಆಸ್ತಿಯನ್ನು ಅದೇ ಸರ್ವೆ ನಂಬರ್ ನಲ್ಲಿ ಕೊಂಡುಕೊಂಡಿದ್ದರು ಎಂದರೆ ಸರಿ. ಒಟ್ಟು 3 ಎಕರೆಯಲ್ಲಿ ವಾದಿಯ ತಂದೆ ತೆಂಗಿನ ಗಿಡವನ್ನು ಬೆಳೆದಿದ್ದರು ಎಂದರೆ ಸರಿ. ಎಲ್ಲಾ ತೆಂಗಿನ ಗಿಡಗಳು ಬೆಳೆ ಬರುತ್ತಿವೆ ಎಂದರೆ ಸರಿ. ಸದರಿ 3 ಎಕರೆಯಲ್ಲಿ ಒಂದು ಕೊಳವೆ ಬಾವಿಯನ್ನು ಕೂಡ ತೆಗೆಸಿದ್ದಾರೆ ಎಂದರೆ ಮೊದಲು ಇತ್ತು ಈಗ ಇಲ್ಲ ಎಂದು ನುಡಿಯುತ್ತಾರೆ. ವಾದಿಯ ತಂದೆ ತೀರಿಕೊಂಡ ನಂತರ ವಾದಿ ಮತ್ತು ಅವರ ಅಣ್ಣ ತಮ್ಮಂದಿರು ದಿಃ 12.05.2015

ರಂದು ಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ಭಾಗದಲ್ಲಿ ಮೇಲ್ಕಂಡ ಸ.ನಂ.12/5 ರ 3 ಎಕರೆ ಜಮೀನು ವಾದಿಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ. ಸದರಿ 3 ಎಕರೆ ಜಮೀನಿನಲ್ಲಿ ವಾದಿಯೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ.

2. 2018 ರಲ್ಲಿ ಈ ಮೇಲ್ಕಂಡ 3 ಎಕರೆ ಪೈಕಿ 38 ವರೆ ಗುಂಟೆ ಎತ್ತಿನಹೊಳೆ ಕಾಲುವೆಗೆ ಸ್ವಾಧೀನಗೊಂಡಿರುತ್ತದೆ ಎಂದರೆ ಸರಿ. ಎತ್ತಿನಹೊಳೆ ಕಾಲುವೆಯು ಪೂರ್ವ ಪಶ್ಚಿಮವಾಗಿರುತ್ತದೆ ಎಂದರೆ ಸರಿ. ಎತ್ತಿನಹೊಳೆಗೆ ಸ್ವಾಧೀನಗೊಂಡ ನಂತರ ಉತ್ತರಕ್ಕೆ 1 ಎಕರೆ 32 ವರೆ ಗುಂಟೆ ಮತ್ತು ದಕ್ಷಿಣಕ್ಕೆ 9 ಗುಂಟೆ ಉಳಿದುಕೊಂಡಿರುತ್ತದೆ ಎಂದರೆ ಸಾಕ್ಷಿಯು ದಕ್ಷಿಣಕ್ಕೆ 9 ಗುಂಟೆ ಉಳಿದುಕೊಂಡಿರುತ್ತದೆ ಎಂಬುದು ಸುಳ್ಳು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಕಾಲುವೆಯಿಂದ ದಕ್ಷಿಣಕ್ಕೆ ವಾದಿ ಹೊನ್ನಗಂಗಪ್ಪ ರವರಿಗೆ ಕೇವಲ 5 ಗುಂಟೆಯಷ್ಟು ಆಸ್ತಿ ಉಳಿದುಕೊಂಡಿರುತ್ತದೆ ಎಂದು ನುಡಿಯುತ್ತಾರೆ. ಈ ಬಗ್ಗೆ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಉಳಿಕೆ 9 ಗುಂಟೆಯ ಪಶ್ಚಿಮಕ್ಕೆ ನಿಮ್ಮ ಆಸ್ತಿ ಇರುತ್ತದೆ ಎಂದರೆ ಸಾಕ್ಷಿಯು ವಾದಿಗೆ ಸೇರಿದ 5 ಗುಂಟೆಯ ಪಶ್ಚಿಮಕ್ಕೆ ನನ್ನ ಆಸ್ತಿ ಬರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಆಸ್ತಿ ಖುಷ್ಕಿ ಜಮೀನು ಎಂದರೆ ಸರಿ. 2021 ರಲ್ಲಿ ವಾದಿಯ 9 ಗುಂಟೆ ಆಸ್ತಿಯಲ್ಲಿ ಇದ್ದ ತೆಂಗಿನ ಮರಗಳಲ್ಲಿ ನೀವು ತೆಂಗಿನ ಕಾಯಿಯನ್ನು ಕೀಳಲು ಹೋಗಿರುತ್ತೀರಿ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಮ್ಮ ಆಸ್ತಿಯಲ್ಲಿ ವಾದಿಯೇ ತೆಂಗಿನ ಕಾಯಿಗಳನ್ನು ಕೀಳಲು ಬಂದಿದ್ದರಿಂದ ನಾನೇ ಒಂದು ದಾವವನ್ನು ವಾದಿಯ ವಿರುದ್ಧ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ವಾದಿಯು ನಿಮ್ಮ ವಿರುದ್ಧ ಚೇಳೂರು ಪೋಲೀಸ್ ಠಾಣೆಗೆ ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅವರ ವಿರುದ್ಧ ನಾನೇ ನನಗೆ ತೊಂದರೆ ನೀಡುತ್ತಿದ್ದಾರೆ ಎಂದು ಹೇಳಿ ದೂರನ್ನು ನೀಡಿದ್ದೆನು ಎಂದು ನುಡಿಯುತ್ತಾರೆ. ಏನೆಂದು ದೂರನ್ನು ನೀಡಿದ್ದೀರಿ ಎಂದರೆ ಸಾಕ್ಷಿಯು ನನಗೆ ತೊಂದರೆ ನೀಡುತ್ತಿದ್ದಾರೆ ಬಂದು ಬೇಲಿಯನ್ನು ಕೀಳುತ್ತಿದ್ದಾರೆ ಇದೇ ರೀತಿ 1990 ರಲ್ಲಿಯೂ 14 ಗುಂಟೆ ಇಲ್ಲ

ಎಂದು ಗಲಾಟೆ ಮಾಡಿದ್ದರು, ಗುಬ್ಬಿ ತಹಸೀಲ್ದಾರ್ ರವರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿತ್ತು ಪ್ರಕರಣದ ಸಂಖ್ಯೆ: RRT DISK 13/1990-91 ರ ಪ್ರಕರಣ ಎಂದು ನುಡಿಯುತ್ತಾರೆ. ನೀವು ಯಾರ ವಿರುದ್ಧ ಆ ಪ್ರಕರಣದ ದಾಖಲು ಮಾಡಿದ್ದೀರಿ ಎಂದರೆ ಸಾಕ್ಷಿಯು ಎಸ್ ಪಿ ಷಡಕ್ಷರಯ್ಯ ರವರ ವಿರುದ್ಧ ನನ್ನ ತಂದೆ ದಾಖಲು ಮಾಡಿದ್ದರು ಎಂದು ನುಡಿಯುತ್ತಾರೆ. ಆ ಪ್ರಕರಣದ ನಡೆದು ನನ್ನ ಪರ ಆಗಿರುತ್ತದೆ, ಎಂ ಆರ್ ನಲ್ಲಿ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ. ಆ ಪ್ರಕರಣದಲ್ಲಿ ಏನೆಂದು ಆದೇಶವಾಗಿರುತ್ತದೆ ಎಂದರೆ ಸಾಕ್ಷಿಯು 14 ಗುಂಟೆ ಡಿ ಆರ್ ವೀರಭದ್ರಯ್ಯ ರವರದ್ದು ಎಂದು ಆದೇಶವಾಗಿರುತ್ತದೆ ಎಂದು ನುಡಿಯುತ್ತಾರೆ. ನೀವು ವಾದಿಯ ತಂದೆಯ ಕಾಲದಿಂದಲೂ ಕೂಡ ನೀವು ಅವರಿಗೆ ತೊಂದರೆ ನೀಡುತ್ತಾ ಬಂದಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಆಸ್ತಿಯ ಒಳಗೆ ಯಾವುದೇ ತೆಂಗಿನ ಗಿಡಗಳು ಇಲ್ಲದೇ ಇದ್ದರು ಕೂಡ ನಿಮ್ಮ ಆಸ್ತಿಯ ಒಳಗೆ ತೆಂಗಿನ ಗಿಡ ಇದೆ ಎಂದು ಹೇಳಿ ವಾದಿಗೆ ಯಾವಾಗಲೂ ತೊಂದರೆ ನೀಡುತ್ತಾ ಬಂದಿದ್ದೀರಿ ಎಂದರೆ ಸರಿಯಲ್ಲ.

3. 2018 ರಲ್ಲಿ ಎತ್ತಿನ ಹೊಳೆಗೆ ನಿಮ್ಮ ಎಷ್ಟು ಜಮೀನು ಸ್ವಾಧೀನಗೊಂಡಿರುತ್ತದೆ ಎಂದರೆ ಸಾಕ್ಷಿಯು 5 ಗುಂಟೆ ಎಂದು ನುಡಿಯುತ್ತಾರೆ. ಉತ್ತರದಲ್ಲಿ ಎಷ್ಟು ಜಮೀನು ಉಳಿದಿರುತ್ತದೆ ಮತ್ತು ದಕ್ಷಿಣದಲ್ಲಿ ಎಷ್ಟು ಜಮೀನು ಉಳಿದಿರುತ್ತದೆ ಎಂದರೆ ಸಾಕ್ಷಿಯು ಕಾಲುವೆಯಿಂದ ದಕ್ಷಿಣಕ್ಕೆ 9 ಗುಂಟೆ ಉಳಿದಿರುತ್ತದೆ, ಉತ್ತರಕ್ಕೆ ಬೇರೆ ಯಾವುದೇ ನನ್ನ ಜಮೀನು ಉಳಿದಿಲ್ಲ ಎಂದು ನುಡಿಯುತ್ತಾರೆ. ನಿಮಗೆ ಉಳಿದಿರುವ ಸ್ವತ್ತಿನಲ್ಲಿ ಮರುಳ ಸಿದ್ದಪ್ಪ ರವರು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಿಮ್ಮ ಉಳಿಕೆ ಸ್ವತ್ತಿನಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ನಾನೇ ಇದ್ದೇನೆ ಎಂದು ನುಡಿಯುತ್ತಾರೆ. ನಿಮಗೆ ಉಳಿದ 9 ಗುಂಟೆ ಜಮೀನಿನಲ್ಲಿ ನೀವು ಕೇವಲ 5 ಗುಂಟೆಯಲ್ಲಿ ಮಾತ್ರ ಸ್ವಾಧೀನದಲ್ಲಿ ಇದ್ದು ಉಳಿದ 4 ಗುಂಟೆಯಲ್ಲಿ ಮರುಳ ಸಿದ್ದಪ್ಪ ರವರು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಿಮಗೆ ಉಳಿದಿದ್ದ ಆಸ್ತಿಯನ್ನು ನೀವೇನಾದರೂ ಮಾರಾಟ ಮಾಡಲು ಪ್ರಯತ್ನಪಟ್ಟಿದ್ದೀರಾ

ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ವಾದಿಯ ವಿರುದ್ಧ ದಾವಾವನ್ನು ಸಲ್ಲಿಸುವ ಮೊದಲು ನಿಮಗೆ ಉಳಿದಿದ್ದ ಆಸ್ತಿಯನ್ನು ಕೊಂಡುಕೊಳ್ಳುವಂತೆ ವಾದಿಯನ್ನು ಕೇಳಿದ್ದೀರಿ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ವಾದಿಯೇ ನಮ್ಮ ವಕೀಲರನ್ನು ಕೇಳಿದ್ದರು ಆದರೆ ಬೆಲೆ ಬಾಳುವ ಆಸ್ತಿ, ಪಿತ್ರಾರ್ಜಿತ ಆಸ್ತಿ ಕೊಡುವುದಿಲ್ಲ ಎಂದು ನುಡಿಯುತ್ತಾರೆ. ನೀವು ಮತ್ತು ನಿಮ್ಮ ವಕೀಲರ ಮೂಲಕ ಆಸ್ತಿಯನ್ನು ಮಾರಾಟ ಮಾಡುತ್ತೇನೆ ಎಂದು ವಾದಿಯನ್ನು ಕೇಳಿದಾಗ ಮರುಳ ಸಿದ್ದಪ್ಪ ರವರು ಒತ್ತುವರಿ ಮಾಡಿಕೊಂಡಿರುವ ಆಸ್ತಿಯನ್ನು ಬಿಡಿಸಿಕೊಟ್ಟರೇ ತಾನು ತೆಗೆದುಕೊಳ್ಳುವುದಾಗಿ ವಾದಿಯು ನಿಮಗೆ ಹೇಳಿದ್ದರು ಎಂದರೆ ಸರಿಯಲ್ಲ. ನಿಮ್ಮ ಆಸ್ತಿಯ ಪೂರ್ವದ ಕಡೆ ವಾದಿಯ ಆಸ್ತಿಯನ್ನು ನೀವು ಒತ್ತುವರಿ ಮಾಡಲು ಪ್ರಯತ್ನಪಟ್ಟಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಆಸ್ತಿ ಅಲ್ಲಿಯವರೆಗೆ ಬರಬೇಕು ಎಂದು ಹೇಳಿ 2021 ರಲ್ಲಿ ವಾದಿಯ ಆಸ್ತಿಯಲ್ಲಿ ಇದ್ದ ತೆಂಗಿನ ಮರಗಳಿಂದ ತೆಂಗಿನ ಕಾಯಿಗಳನ್ನು ಕೂಡ ಕಿತ್ತಿರುತ್ತೀರಿ ಎಂದರೆ ಸರಿಯಲ್ಲ. ಅದರ ಬಗ್ಗೆ ದೂರನ್ನು ನೀಡಿದಾಗ ನೀವು ನ್ಯಾಯಾಲಯದಲ್ಲಿ ಪ್ರಕರಣವಿರುತ್ತದೆ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುತ್ತೇವೆ ಎಂದು ಪೋಲೀಸರ ಮುಂದೆ ಹೇಳಿಕೆಯನ್ನು ಕೂಡ ನೀಡಿದ್ದೀರಿ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನ ಮೇಲೆ ನಿಮಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**.

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.